ಕೇಳುಗರೊಬ್ಬರಿದ್ದಾರೆ. ಅವರು ದೇಶದ ಎಲ್ಲ ಬಾನುಲಿ ಕೇಂದ್ರಗಳಿಗೂ ತಿಂಗಳಿಗೆರಡು ಕಾರ್ಡು ಕಳಿಸಿ ನಿಮ್ಮ ಇಷ್ಟದ ಗೀತೆಯನ್ನು ನಮಗಾಗಿ ನಮ್ಮ ಹೆಸರು ಹೇಳಿ ಪ್ರಸಾರ ಮಾಡಿ ಎಂದು ವಿನಂತಿ ಮಾಡುತ್ತಲೇ ಇರುತ್ತಾರೆ. ಹೀಗೆಂದು ಹಿಂದಿ ಮತ್ತು ಇಂಗ್ಲೀಷಿನಲ್ಲಿ ಸೀಲ್ ಮಾಡಿಸಿಬಿಟ್ಟಿದ್ದಾರೆ. ಭಾಷಾ ಭಾವೈಕ್ಯತೆಗೆ ಇದೂ ಒಂದು ಮಾದರಿಯಲ್ಲವೇ? ಆಗ 'ಸವಿನೆನಪು ' ಎಂಬ ಹಳೆಯ ಚಿತ್ರಗೀತೆಗಳ ಕಾರ್ಯಕ್ರಮ ಕಾರಣಾಂತರದಿಂದ ಮೂರುವಾರ ಪ್ರಸಾರವಾಗದುದಕ್ಕೆ ಶ್ರೋತೃಬಳಗ ಅದಕ್ಕೊಂದು ಚಿತ್ರಬರೆದು ಹಾರ ಹಾಕಿ ಶ್ರದ್ಧಾಂಜಲಿ ಸಲ್ಲಿಸಿದ್ದರು. ಈಗಲೂ ಚಿತ್ರಗೀತೆಗಳ ಕುರಿತ ಕೇಳುಗರ ಆಸಕ್ತಿ ಕಿಂಚಿತ್ತೂ ಕಡಿಮೆಯಾಗಿಲ್ಲ. ಕೇಳುವ ರೂಪಗಳು ಬಿತ್ತರಿಸುವ ವಿಧಾನಗಳು ಬದಲಾಗಿವೆಯಷ್ಟೆ. ಇಷ್ಟಾಗಿಯೂ ಒಂದು ವರ್ಗದ ಜನರಿಗೆ ಚಿತ್ರಗೀತೆಗಳನ್ನು ಕೇಳುವುದು ಕಡಿಮೆ ದರ್ಜೆಯ ಹವ್ಯಾಸ ಎಂದೆನಿಸಿಬಿಟ್ಟಿರುತ್ತದೆ. ಚಿತ್ರಗೀತೆ ಎಂದೊಡನೆ ಮುಖ ಕಿವುಚುವುದು ಅವರ ಅಭ್ಯಾಸ. ಜೊಳ್ಳುಗಳು ಜಾಸ್ತಿಯಿರಬಹುದು. ಆದರೆ ಅಲ್ಲಿ ಅಪೂರ್ವವಾದ ಮುತ್ತು ಹವಳದ ರಾಶಿಯೂ ಇದೆ ಎಂದು ಅವರಿಗೆ ತಿಳಿಯದು. ಅಂತಹವರನ್ನು ಕಂಡಾಗ ಕರುಣೆಯುಕ್ಕುತ್ತದೆ. ಇದಕ್ಕೆ ತಕ್ಕ ಉತ್ತರ ನೀಡಿದವರೆಂದರೆ ಎಂ. ಬಾಲಮುರಳಿಕೃಷ್ಣ ಅವರೊಬ್ಬರೇ ಎಂದು ಕಾಣುತ್ತದೆ. ಯಾವುದು ಶಾಸ್ತ್ರೀಯ ಸಂಗೀತ? ಎಂದು ಕೇಳಿದ್ದಕ್ಕೆ 'ಶಾಸ್ತ್ರೀಯ ಮಾತ್ರ ನಾಲ್ಕು ಕಾಲ ಉಳಿಯುವ ಸಂಗೀತವೆಂದಾದಲ್ಲಿ ಎಲ್ಲ ರಸಗಳನ್ನೂ ಒಳಗೊಂಡ ಸಿನಿಮಾ ಸಂಗೀತ ಬಹುಕಾಲ ಉಳಿಯುವುದರಿಂದ ಅದು ಶಾಸ್ತ್ರೀಯ ಸಂಗೀತವೇಕಾಗುವುದಿಲ್ಲ?' ಎಂದು ಅವರು ಅಡ್ಡಪ್ರಶ್ನೆ ಹಾಕಿದರು. 'ಒಂದು ವೇಳೆ ಚಿತ್ರಗೀತೆಗಳಲ್ಲಿ ಅವರು ತಂದಿರುವ ವೈವಿಧ್ಯವನ್ನು ನಾವು ಶಾಸ್ತ್ರೀಯ ಸಂಗೀತದಲ್ಲಿ ತಂದರೆ ಅದರ ಸ್ಥಾನ ತಲೆತಿರುಗುವಷ್ಟು ಎತ್ತರ ಮುಟ್ಟುತ್ತದೆ ಗೊತ್ತೇ?' ಎಂದರು. ಅವರ ಇನ್ನೊಂದು ಅಭಿಪ್ರಾಯ ನೀಡಲು ಅವರಿಗೆ ಅವರೇ ಸಾಟಿ. 'ನಾನು ಜಗತ್ತಿನೆಲ್ಲೆಡೆ ಸಂಗೀತ ಹಾಡಿ ಬಂದಿದ್ದೇನೆ. ಯಾರಾದರೂ ಭಾರತೀಯ ಸಂಗೀತದ ಸಕಲ ರಹಸ್ಯ ಸಮೃದ್ಧತೆಗಳನ್ನು ಶೋಧಿಸಿ ಪ್ರಭುತ್ವ ಸಾಧಿಸಿದ್ದಾರೆಂದಾದರೆ ಅದು ಇಳಯರಾಜ' ಎಂದು ಹೇಳಿದರು. ಇದು ಚಿತ್ರಸಂಗೀತಕ್ಕೆ ಬಾಲಮುರಳಿ ನೀಡಿದ ಸರ್ಟಿಫಿಕೇಟು.

ಇಷ್ಟಾಗಿಯೂ ಹೆಸರಾಂತ ಸಂಗೀತ ಶಾಸ್ತ್ರಜ್ಞ, ಕಲಾ ಮೀಮಾಂಸಕರೊಬ್ಬರನ್ನು ಕಾರ್ಯಕ್ರಮವೊಂದಕ್ಕೆ ಮಾತನಾಡಿಸುವ ಎರಡು ದಿನ ಮೊದಲು ಆ ಕಾರ್ಯಕ್ರಮದಲ್ಲಿ ಪ್ರಸಾರ ಮಾಡಬೇಕಾದ ಚಿತ್ರಗೀತೆಗಳ ಬಗ್ಗೆ ಪ್ರಸ್ತಾಪಿಸಿದೆ. ಬೇಡ, ಅದರಲ್ಲೇನಿರುತ್ತೆ ಎಂದು ನಕ್ಕರು. ಬೇಕೇ ಬೇಕು ಎಂದಾಗ, 'ನಿಮಗೇ ತೋಚಿದ್ದು ಹಾಕಿ. ನನಗೆ ಅದರ ಅಗತ್ಯವಿಲ್ಲ' ಎಂದರು. ಮಾಡ್ತೀನಿ ಇರಿ, ಅಂದುಕೊಂಡು ನೇರ ಪ್ರಸಾರದ ಆ ಕಾರ್ಯಕ್ರಮದಲ್ಲಿ ಅವರೂ ತಲೆದೂಗುವಂಥ ಅತ್ಯಂತ ಪ್ರಯೋಗಶೀಲ ಚಿತ್ರಗೀತೆಗಳನ್ನು ನಡುವೆ ಹಾಕಿದೆ. ಅವರು ನಕ್ಕು ಕಾರ್ಯಕ್ರಮದ ನೇರಪ್ರಸಾರದಲ್ಲೇ 'ಈ ಗೀತೆಗಳನ್ನು ನೀವು ಹಾಕಿದ ಕಾರಣ ನನಗೆ ತಿಳಿದಿದೆ. ಚಿತ್ರಗೀತೆಗಳ ವಿಚಾರದಲ್ಲಿ ನೀವು ನನ್ನ ಕಣ್ಣು ತೆರೆಸಿದ್ದೀರಿ, ಆ ಕುರಿತ ನನ್ನ ಅಭಿಪ್ರಾಯ ಬದಲಾಯಿಸಿಕೊಂಡಿರುವೆ' ಎಂದು ಹೇಳಿದರು. ಅದು ಅವರ ವಿನಯ. ಮತ್ತೊಬ್ಬ ಎಂಬತ್ತರ ಹರೆಯದ ಸಾಹಿತಿಯೊಬ್ಬರು ತಮಗೆ ಇಷ್ಟವಾದ ಗೀತೆಯನ್ನು ನೇರಪ್ರಸಾರದಲ್ಲಿ ಕಣ್ಣು ಮುಚ್ಚಿ ಆನಂದದಿಂದ ಆಲಿಸಿದಮೇಲೆ ಕೇಳಲೋ ಬೇಡವೋ ಎಂದು ಹಿಂಜರಿದು ನಾನು ಕಾರಣ ಕೇಳಿದೆ. ನೇರವಾಗಿ ನಿಸ್ಸಂಕೋಚವಾಗಿ ಅವರು ಹೇಳಿದರು. ಅವರು ಕೆಲಸಕ್ಕೆ ಸೇರಿದ ಹೊಸದರಲ್ಲಿ ಅವರು ಬಹುವಾಗಿ ಪ್ರೀತಿಸಿದ ಹುಡುಗಿಯ ಮೆಚ್ಚಿನ ಗೀತೆ ಅದಾಗಿತ್ತು. ಅಳಿದು ಹೋದ ನೆನಪಿನೊಡನೆ